ಮತ್ತು ನಾಟಕಕಾರ್ತಿ ದೆಬ್ರಾ ಲೆವಿ.

ಸ್ಯಾಲಿ ರೂನಿ ಎಂಬ ಐರಿಷ್ ಲೇಖಕಿ 'ಬ್ಯೂಟಿಫುಲ್ ವರ್ಲ್ಡ್, ವೇರ್ ಆರ್ ಯೂ' (2021) ಎಂಬ ಕಾದಂಬರಿಯಲ್ಲಿ ಈರ್ವರು ಆಪ್ತಮಿತ್ರರು ತಮ್ಮ ನಡುವಣ ಪ್ರೀತಿ, ಸೆಳೆತ ಮತ್ತು ಆಧುನಿಕ ಜಗತ್ತಿನ ಒತ್ತಡಗಳನ್ನು ನಿಭಾಯಿಸಲು ಹೆಣಗುತ್ತಾರೆ.

ಇಂತಹ ಅನೇಕ ಲೇಖಕಿಯರು ಪ್ರವರ್ಧಮಾನಕ್ಕೆ ಬರುತ್ತಿರುವ ಈ ನಮ್ಮ ಕಾಲದಲ್ಲಿ ಹೆಣ್ಣಿನ, ಮಹಿಳೆಯ ಅನುಭವಗಳು ಪಿತೃಪ್ರಧಾನ ಸಮಾಜ ಮತ್ತದರ ಶೋಷಣೆಯ ಉದ್ದಗಲದಾಚೆಗೆ ವಿಸ್ತರಣೆಗೊಂಡು ಜಾಗತಿಕ ವಲಯದಲ್ಲಿ ನವೀನ ರೀತಿಯ ನುಡಿಗಟ್ಟು, ಶಬ್ದಪ್ರಯೋಗ, ಆಧುನಿಕ ಜಗತ್ತಿನ ಅನುಭವ ಜನ್ಯ ಕಥಾನಕಗಳು ಸೃಷ್ಟಿಯಾಗುತ್ತಿವೆ.

* * *

ಇದೇ ಕಾಲಮಾನದಲ್ಲಿ ಭಾರತೀಯ ಮಹಿಳಾ ಲೇಖಕಿಯರು ಹೊಸ ಪ್ರಪಂಚದ ಸಂವೇದನೆಗಳನ್ನು ತಮ್ಮ ಬರಹಗಳಲ್ಲಿ ಮೂಡಿಸತೊಡಗುತ್ತಿರುವುದು ಕಾಣುತ್ತಿದೆ. ಸ್ತ್ರೀವಾದ, ಲಿಂಗ ಸಂಘರ್ಷಗಳು, ಬಹುಲಿಂಗೀಯತೆ, ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳು ಮುಂತಾದ ವಸ್ತುಗಳನ್ನು ಕೇಂದ್ರವಾಗಿಟ್ಟುಕೊಂಡು ಬರೆಯುವ ಮಲಯಾಳಂನ ಸಿತಾರಾ ಎಸ್. 'ಕಥೆಗಳ್' (2015)ಎಂಬ ತಮ್ಮ ಕಥಾ ಸಂಕಲನದಲ್ಲಿ ಆಧುನಿಕ ಮಹಿಳೆಯರ ಜೀವನ, ಅವರ ಶಕ್ತಿ ಹಾಗೂ ಸವಾಲುಗಳನ್ನು ತೆರೆದಿಡುತ್ತಾರೆ. ಅನಿತಾ ತಂಪಿ ಎಂಬ ಮಲಯಾಳಂ ಕವಯಿತ್ರಿ ವೈಯಕ್ತಿಕ, ಸಾಮುದಾಯಿಕ ಅನುಭವಗಳ ಮುಖೇನ ಸಾಮಾಜಿಕ ಕಟ್ಟುಪಾಡುಗಳು ಮತ್ತು ಹೆಣ್ಣಿನ ಅಸ್ತಿತ್ವದ ನೆಲೆಯನ್ನು ಅನ್ವೇಷಿಸುತ್ತಾರೆ. ಇವರ ಕವಿತೆಗಳಲ್ಲಿ ಅನುದಿನದ ಸಂಗತಿಗಳ ಅಂತರ್ಗತ ಸೌಂದರ್ಯ ತೆರೆದುಕೊಳ್ಳುತ್ತಾ ಹೋಗುತ್ತದೆ. ಅವರ ಮಲಯಾಳಂ ಕವನ ಸಂಕಲನಗಳು 'ವೈಲ್ ಸ್ವೀಪಿಂಗ್ ದ ಫ್ರಂಟ್ ಯಾರ್ಡ್' (2016) ಮತ್ತು 'ಆಲ್ ದೆಟ್ ಆರ್ ಡಿವಾಯ್ಡ್ ಆಫ್ ಬ್ಯೂಟಿ' (2019) ಎಂದು ಆಂಗ್ಲ ಭಾಷೆಗೆ ಅನುವಾದಗೊಂಡಿವೆ.

ಕೇವಲ ಐವತ್ತೊಂದು ವರ್ಷ ಕಾಲ ಮಾತ್ರ ಜೀವಿಸಿದ್ದರೂ ಮರಾಠಿ ಸಾಹಿತ್ಯದಲ್ಲಿ ತನ್ನ ಅಳಿಯದ ಛಾಪು ಮೂಡಿಸಿದ ಕವಿತಾ ಮಹಾಜನ್ 'ಭಿನ್ನ' (2007) ಎಂಬ ತಮ್ಮ ಕಾದಂಬರಿಯಲ್ಲಿ ಎಚ್‌ಐವಿ/ಏಡ್ಸ್ ಪೀಡಿತರ ಬದುಕಿನ ಸುತ್ತ ನಡೆಯುವ ಪ್ರಾತಿನಿಧ್ಯ ರಾಜಕೀಯದ ವಿವಿಧ ಸ್ತರಗಳನ್ನು ಶೋಧಿಸುತ್ತಾರೆ. 'ಕುಹೂ' (2011) ಎಂಬ ಇವರ ಮತ್ತೊಂದು ಕೃತಿ ಮಲ್ಟಿಮೀಡಿಯಾ ಕಾದಂಬರಿಯಾಗಿ ಪ್ರಸಿದ್ಧವಾಗಿದೆ. ಮಾನವ ಮತ್ತು ಪ್ರಕೃತಿಯ ನಡುವಣ ಸಂಬಂಧದಲ್ಲಿ ಅನ್ವೇಷಿಸುವ ಈ ಕೃತಿಯೊಂದಿಗೆ ಪ್ರಕೃತಿಯ ಅಸಂಖ್ಯ ದೃಶ್ಯ ಮತ್ತು ಸದ್ದುಗಳಿರುವ ಡಿವಿಡಿಯೂ ಅಡಕಗೊಂಡಿದೆ. ಇನ್ನೋರ್ವ ಮರಾಠಿ ಲೇಖಕಿ ಆಶಾ ಬಾಗೆರವರ 'ಭೂಮಿ' (2004) ಕಾದಂಬರಿಯು 2004ರಲ್ಲಿ ಭಾರತದಲ್ಲಿ ಸಂಭವಿಸಿದ ಸುನಾಮಿ ಉಂಟುಮಾಡಿದ ಅನಾಹುತ, ನಾಶಗಳನ್ನು ಆಧರಿಸಿದೆ. ಈ ಕೃತಿಗೆ 2006ರಲ್ಲಿ ಮರಾಠಿ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಸಂದಿದೆ.

ತಮಿಳುನಾಡಿನ ಸಂಪ್ರದಾಯವಾದಿ ಗ್ರಾಮವೊಂದರಲ್ಲಿ ಮುಸ್ಲಿಂ ಮಹಿಳೆಯರ

